ಈ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ. ಏಕೆಂದರೆ ವಾಸುದೇವನರವರನ್ನು ಬೆಳಿಗ್ಗೆ ನಾವು ಭೇಟಿ ಮಾಡುವುದಕ್ಕೆ ಹೋಗಿದ್ದೆವು.

(ಗೊಂದಲ)

ಅಧ್ಯಕ್ಷರು : ನನಗೆ ಯಾರ್ಯಾರು ಎಲ್ಲೆಲ್ಲಿ ಇದ್ದಾರೋ ಅವರು ಅಲ್ಲೇ ಇದ್ದು ನನ್ನನ್ನು ಇಲ್ಲೇ ಇರಬೇಕೆಂಬುದು ನನ್ನ ಕಳಕಳಿ.

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೆ, ತಾವು ಈಗ ತಾರತಮ್ಯ ಮಾಡಿಬಿಟ್ಟರಿ.

ಅಧ್ಯಕ್ಷರು : ನೀವು ನಾವು ಎಲ್ಲಾ ಸೇರಿ ಮಾಡುವುದು ಬೇರೆ ವ್ಯವಸ್ಥೆ. ಇವರ ಜೊತೆಗೆ ನಾವು ಇಲ್ಲ. ನೀವು ಆ ಜಾಗಕ್ಕೆ ನಿಮ್ಮ ಹೆಸರನ್ನು ಹೇಳಲಿಲ್ಲವೆಂದು ಕೇಳುತ್ತಿದ್ದೀರಿ. ಇಲ್ಲಿ ಹೇಳಿದರೆ ಮತ್ತೆ.....

ಶ್ರೀ ವಾಟಾಳ್ ನಾಗರಾಜ್ : ತಾವು ಆ ಜಾಗಕ್ಕೆ ಬರುವವರು ಎನ್ನುವ ವಿಶ್ವಾಸವನ್ನು ನಾನು ಇಟ್ಟುಕೊಂಡಿದ್ದೇನೆಂದು ನೀವು ಖಿರ್ಗೆಯವರಿಗೆ ಹೇಳಿದಿರಿ, ಅದೇಕೆ ನೀವು ನನಗೆ ಹೇಳಲಿಲ್ಲ.

ಅಧ್ಯಕ್ಷರು : ನಮ್ಮದು ಬೇರೆ ವ್ಯವಸ್ಥೆ ಇದೆಯಲ್ಲಾ.

ಶ್ರೀ ವಾಟಾಳ್ ನಾಗರಾಜ್ : ನಿಜವಾಗಿಯೂ ನೀವು ತಾರತಮ್ಯ ಮಾಡುತ್ತಿದ್ದೀರಿ. ನಿಮ್ಮ ಮಾತಿನ ಮೇಲೆ....

ಅಧ್ಯಕ್ಷರು : ಈಗ ಅವರಾದ್ದಾದರೆ ಪರವಾಗಿಲ್ಲ, ನಮ್ಮದನ್ನೆಲ್ಲಾ ಈಗಲೇ ಬಹಿರಂಗ ಮಾಡಿದರೆ ಇಲ್ಲಿ ಬಹಳ ಸಂಚುಕೋರರಿದ್ದಾರೆ, ನಮಗೆ ತೊಂದರೆ ಮಾಡುತ್ತಾರೆ. ಅದಕ್ಕೆ ನಾವು ಅವಕಾಶ ಕೊಡಬಾರದು ತಾವು, ನಾನು ಬೈರೇಗೌಡರು ಏನು ಮಾತನಾಡಿದ್ದೇವೆ ಆ ಮಾತು ಇನ್ನೂ ಇದೆ.

ಶ್ರೀ ವಾಟಾಳ್ ನಾಗರಾಜ್ : ಹಾಗಾದರೆ ಅದನ್ನು ಬೇರೆ ಸಮಯದಲ್ಲಿ ಇಟ್ಟುಕೊಳ್ಳೋಣ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಬೆಳಿಗ್ಗೆ ಜೈಲ್ ಸುಪರಿಂಟೆಂಡೆಂಟ್‌ರವರನ್ನು ಸಂಪರ್ಕಿಸಿ, ವಾಸುದೇವನ್‌ರವರನ್ನು ಭೇಟಿ ಮಾಡಿ ಅನುಕಂಪ ತೋರಿಸಿ, ನಾವೆಲ್ಲರೂ ನಿಮ್ಮ ಜೊತೆಗಿದ್ದೇವೆ ಎಂದು ಹೇಳೋಣವೆಂದು ಸೆಂಟ್ರಲ್ ಜೈಲಿಗೆ ಹೋಗಿದ್ದೆ. ಆದರೆ ಅವರು ಯಾರನ್ನು ನೋಡಲು ಇಚ್ಛಿಪಡಲಿಲ್ಲ. ಈ ರೀತಿಯ ಒಂದು ಪರಿಸ್ಥಿತಿಯಲ್ಲಿ ನಿಜಕ್ಕೂ ನಮಗೆಲ್ಲಾ ನೋವಾಗುವಂತಹ ಘಟನೆ. ಅದಕ್ಕೆ ತಾವೇನಾದರೂ ಮತ್ತೊಮ್ಮೆ ಪುನರ್ ಪರಿಶೀಲಿಸಿ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಈಗ ಮೊದಲನೆಯ ಪ್ರಶ್ನೆ ಮಲ್ಲಿಕಾರ್ಜುನ ಖಿರ್ಗೆಯವರದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಸರ್ವೇಯರ್ಸ್‌ಗಳನ್ನು ನೇಮಕ ಮಾಡುವುದು

316 - ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ (ಗುರುಮಿಟ್ಕಲ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೂದಾಖಲೆಗಳ ಇಲಾಖೆಗೆ ಬೇಕಾಗಿರುವಂತಹ ಸರ್ವೇಯರುಗಳನ್ನು ನೇಮಕಾತಿ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ; ಇದ್ದಲ್ಲಿ ಯಾವಾಗ ನೇಮಕಾತಿ ಮಾಡಲಾಗುವುದು?

ಆ) ಈ ರೀತಿ ನೇಮಕಾತಿಯನ್ನು ಮಾಡಿದ್ದೇ ಆದರೆ ಮೀಸಲಾತಿ ನಿಯಮದ ಪ್ರಕಾರ ಹಿಂದಿನ ಬಾಕಿಯನ್ನು ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗವುದೆ?

ಇ) ಒಂದು ವೇಳೆ ಅದನ್ನು ಪರಿಗಣಿಸದಿದ್ದಲ್ಲಿ ಮೀಸಲಾತಿ ನಿಯಮಕ್ಕೆ ವಿರುದ್ಧವಾಗಿ ನೇಮಕಾತಿ ಮಾಡಿದಂತಾಗುವುದಿಲ್ಲವೇ?

ಈ) ಸರ್ಕಾರ ಮೀಸಲಾತಿ ನಿಯಮದ ಪ್ರಕಾರ ಹಿಂದಿನ ಬಾಕಿಯನ್ನು ಭರರ್ತಿ ಮಾಡಲಾಗುವುದೆಂದು ಭರವಸೆಯನ್ನು ನೀಡುವುದೇ?

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಭೂಮಾಪಕರ ನೇಮಕಾತಿ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದ್ದು, ಶೀಘ್ರದಲ್ಲಿಯೇ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಮೀಸಲಾತಿಯಂತೆ ಹಿಂದಿನ ಬಾಕಿ ಇರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ನಾನು ಕೇಳಿದಂಥ ಪ್ರಶ್ನೆಗೆ ಅವರು ಬ್ಯಾಕಲಾಗ್ ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ. ನನ್ನದು ಏನೆಂದರೆ ಹಿಂದೆ ಡಿವಿಜನ್‌ವೈಸ್ ರಿಕ್ರೂಟ್‌ಮೆಂಟ್ ಏತಕ್ಕೆ ಮಾಡುತ್ತಿದ್ದರು ಎಂದರೆ ಅನೇಕ ಸರ್ವೆಯರ್ಸ್ ಒಂದು ಡಿವಿಜನ್‌ನಿಂದ ಇನ್ನೊಂದು ಡಿವಿಜನಗೆ ಪೋಸ್ಟಿಂಗ್ ಮಾಡಿದರೆ ಹೋಗುತ್ತಿರಲಿಲ್ಲ. ಉದಾಹರಣೆಗೆ ಕೆಲವು ಜನ ಸರ್ಪಲಸ್ ಹ್ಯಾಂಡ್ಸ್ ಹೈದ್ರಾಬಾದ್ ಕರ್ನಾಟಕದಲ್ಲಿದ್ದಾರೆ. ಅಥವಾ ಬಾಂಬೆ ಕರ್ನಾಟಕದಲ್ಲಿದ್ದಾರೆ ಅವರನ್ನು ಕೂರ್ಗ ಅಥವಾ ಚಿಕ್ಕಮಗಳೂರಿಗೆ ಹಾಕುತ್ತಾರೆ ಅವರು ಅಲ್ಲಿಗೆ ಹೋಗುವುದಿಲ್ಲ ಮತ್ತು ಇಲ್ಲಿ ಇರತಕ್ಕಂಥವರು ಯಾರಾದರೂ ಇದ್ದರೆ ಆ ಕಡೆ ಹಾಕಿದರೆ ಅವರು ಹೋಗುವುದಿಲ್ಲ ಹೀಗಾಗಿ ತೊಂದರೆಯಾಗುತ್ತಿದೆ. ಅದಕ್ಕಾಗಿ ತಾವು ಡಿಸ್ಟ್ರಿಕ್ಟ್‌ವೈಸ್ ಏನಾದರೂ ರಿಕ್ರೂಟಮೆಂಟ್ ಕಮಿಟೀಸ್ ಮಾಡಿ ರಿಕ್ರೂಟ್ ಮಾಡುತ್ತೀರೋ ಹೇಗೋ? ಎರಡನೆಯದು ಇತ್ತೀಚೆಗೆ ಏನು ಮಾಡಿದ್ದಾರೆ ಎಂದರೆ ಕೆಲವು ಐ.ಟಿ.ಐ.ನಲ್ಲಿ ಸರ್ವೆಯರ್ ಡಿಪಾರ್ಟ್‌ಮೆಂಟಿನಲ್ಲಿ ಇದ್ದವರು ಮಾತ್ರ ಕೋರ್ಸಿಗೆ ಬರಬೇಕು ಅಥವಾ ಪಾಲಿಟೆಕ್ನಿಕ್‌ನಲ್ಲಿ ಸರ್ವೆಯರ್ ಇದ್ದವರು ಮಾತ್ರ ಇದಕ್ಕೆ ಬರಬೇಕು ಎಂದು ಒಂದು ಕಂಡಿಷನ್ ಹಾಕಿ ರೂಲ್ ಅಮೆಂಡ್ ಮಾಡಿದರು. ಅದು ಕಾರಣ ಏನಾಗಿದೆ ಎಂದರೆ ರೋಸ್ಟರ್‌ನಲ್ಲಿ ಅನೇಕ ಜನ ಈ ಸರ್ವೆಯರ್ ಟ್ರೇನಿಂಗ್ ಮಾಡಿದವರು ಸಿಕ್ಕುವುದಿಲ್ಲ. ಅದಕ್ಕಾಗಿ ಆ ರೈಡರ್ ಹಾಕಿದ್ದಾರೆ. ಅದು ಗೊತ್ತು. ಅದಕ್ಕಾಗಿ ನಾನು ಅದನ್ನು ಎಕ್ಸಂಪ್ಟ ಮಾಡಿ ಡಿವಿಜನ್ ವೈಸ್ ನೀವು ಮಾಬೇಕು, ಪೂಲ್ ಮಾಡಿ

ಸರ್ವೆಯರಗಳನ್ನು ಡಿಸ್ಟ್ರಿಬ್ಯೂಟ್ ಮಾಡಬೇಕು ಎನ್ನತಕ್ಕಂಥ ಆದೇಶವನ್ನು ಮಾಡಿ. ಅದು ಪ್ರೋಸೆಸ್ ಆಯಿತು, ಸಂದರ್ಶನವಾಯಿತು, ಎಲ್ಲಾ ಆಯಿತು. ಎಲ್ಲಾ ಆದಮೇಲೆ ಅನೌನ್ಸ್ ಮಾಡುವ ಸ್ಟೇಜ್‌ಗೆ ಬಂದಿತ್ತು, ಕಾರಣಾಂತರದಿಂದ ಅದು ಪೋಸ್ಟಪೋನ್‌ಡ್ ಆಯಿತು. ಇನ್ನೊಬ್ಬ ಮಂತ್ರಿ ಬಂದರು. ಅದನ್ನು ರಿಜೆಕ್ಟ ಮಾಡಿದರು. ಅದಕ್ಕಾಗಿ ನಾನು ತಮಗೆ ಕೇಳುತ್ತೇನೆ ತಾವು ಏನಾದರೂ ಈ ರೋಸ್ಟರ್ ಸಿಸ್ಟಮ್ ಮೈನಟೇನ್ ಮಾಡುವುದಕ್ಕೋಸ್ಕರ ಅವರಿಗೆ ಎಕ್ಸಂಪಷನ್ ಕೊಟ್ಟು ರಿಕ್ರೂಟಮೆಂಟ್ ಆದಮೇಲೆ ಟ್ರೈನಿಂಗ್ ಕಳುಹಿಸತಕ್ಕಂಥ ವ್ಯವಸ್ಥೆ ಮಾಡಿತ್ತೀರಾ ಹೇಗೆ ಮತ್ತು ಡಿಸ್ಟ್ರಿಕ್ಟವೈಸ್ ಟ್ರೇನಿಂಗ್ ಮಾಡುತ್ತೀರಾ ಹೇಗೋ ಎನ್ನುವುದು ಸ್ಪಷ್ಟಪಡಿಸಬೇಕು.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ನಮಗೆ ಈಗ 1300 ಸರ್ವೆಯರ್ಸ ಬೇಕಾಗಿದೆ. ನಮಗೆ ಸಿಕ್ಕಿರುವ ಮಾಹಿತಿ ಪ್ರಕಾರ 300 ರಿಂದ 400 ಜನ ಈಗ ಟ್ರೈನಿಂಗ್ ಆಗಿ ಬಂದಿದ್ದಾರೆ ಎಂದು ಸಿಕ್ಕಿದೆ. ಈಗ ಪೂರ್ಣವಾಗಿ ನಾವು ಅವರನ್ನು ನೇಮಿಸಿಕೊಳ್ಳುತಕ್ಕಂಥ ತೀರ್ಮಾನ ಮಾಡಿದ್ದೇವೆ. ಏಕೆಂದರೆ ಉಳಿದ 900 ಜನರಿಗೆ ನಾವು ಒಂದೇ ಸಾರಿ ಟ್ರೈನಿಂಗ್ ಕೊಡುವುದು ಕಷ್ಟವಾಗುತ್ತದೆ. ನಮ್ಮ ಟ್ರೈನಿಂಗ್ ಸ್ಕೂಲ್ ಇರೋದು 50 ಜನರಿಗೆ ಮಾತ್ರ. ಇವರನ್ನು ತೆಗೆದುಕೊಂಡು ಆಯಾಯ ಜಿಲ್ಲಾ ಡೆಪ್ಯೂಟಿ ಡೈರೆಕ್ಟರಗೆ ಕೊಟ್ಟು ಅಲ್ಲಿ ಟ್ರೇನಿಂಗ್ ಕೊಡಿ ಎಂದು ಹೇಳಿ ವ್ಯವಸ್ಥೆ ಮಾಡೋಣ ಎಂದು ಮಾಡಿದ್ದೇವೆ. ಈಗ ಡೈರೆಕ್ಟ ರಿಕ್ರೂಟಮೆಂಟ್ ನಾವು ಮಾಡಿಕೊಳ್ಳುತ್ತೇವೆ, ಈ ಐ.ಟಿ.ಐ.ನಲ್ಲಿ ಪಾಸ್ ಆಗುರುವವರನ್ನು ಮಾಡಿಕೊಳ್ಳುತ್ತೇವೆ, ಅಲ್ಲಿ ಏನು ಶಾರ್ಟಫಾಲ್ ಬಿದ್ದರೆ ಅದನ್ನು ಬೇರೆ 900 ಜನರನ್ನು ತುಂಬಿಕೊಳ್ಳುವಾಗ ಅದನ್ನು ತುಂಬಿಕೊಳ್ಳಲಾಗುತ್ತದೆ. ಎರಡನೆಯದು ಈಗ ನಾವು ಇದನ್ನು ಡಿವಿಜನವೈಸ್ ಕರೆಯುತ್ತಿದ್ದೇವೆ. ಜಿಲ್ಲಾ ಮಟ್ಟದಲ್ಲಿ ರಿಕ್ರೂಟಮೆಂಟ್ ಆಗಬೇಕು ಎಂದು ಹೇಳಿದರೆ ಆ ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಟ್ರಾನ್ಸಫರ್ ಮಾಡುವ ಹಾಗಿಲ್ಲ. ಈಗ ವಿಲೇಜ್ ಅಕೌಂಟ್ಸದು ಏನು ಕಷ್ಟ ಅನುಭವಿಸುತ್ತಿದ್ದೇವೆ ಇವರದ್ದೂ ಹಾಗೆ ಆಗುತ್ತದೆ. ಒಂದು ಸಾರಿ ನಾವು ಸರ್ಕಾರದಲ್ಲಿ ಕೆಲಸಕ್ಕೆ ತೆಗೆದುಕೊಂಡಾಗ ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ, ಒಂದು ಡಿವಿಜನನಿಂದ ಇನ್ನೊಂದು ಡಿವಿಜನಗೆ ಟ್ರಾನ್ಸ್‌ಫರ್ ಮಾಡುವ ಅಧಿಕಾರ ಸರ್ಕಾರಕ್ಕೆ ಇರಬೇಕಾಗುತ್ತದೆ. ಇಲ್ಲದೇಹೋದರೆ ಅವರಿಂದ ಕೆಲಸ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಬರೀ ಅವರ ಸೌಲಭ್ಯಕೋಸ್ಕರವಲ್ಲ ನಾವು ಅವರನ್ನು ಇಲ್ಲಿ ತೆಗೆದುಕೊಳ್ಳುತ್ತಾ ಇರುವುದು. ಸಾರ್ವಜನಿಕ ಸೇವೆ ಆಗಬೇಕೆಂದು ಹೇಳಿ ನಾವು ರಿಕ್ರೂಟ್ ಮಾಡುತ್ತಿದ್ದೇವೆ. ಮತ್ತು ಅವರಿಗೆ ಅನುಕೂಲಗಳನ್ನು ಕೂಡ ಕೊಡುತ್ತಿದ್ದೇವೆ. ಆದುದರಿಂದ ಯಾವ ಮೂಲೆಯಿಂದ ಯಾವ ಮೂಲೆಗೆ ಹಾಕಿದರೂ ಅವರು ಹೋಗುವುದಕ್ಕೆ ತಯಾರಾಗಿರಬೇಕು. ಅಂತಹವರು ಮಾತ್ರ ಅರ್ಜಿ ಹಾಕಬೇಕೆಂದು ಹೇಳಿ ನಾವು ಈ ಸಮಯದಲ್ಲಿ ಸೂಚಿಸುತ್ತಿದ್ದೇನೆ. ಮತ್ತು ರೋಸ್ಟರ್ ಬಗ್ಗೆ ತಾವು ಹೇಳುತ್ತಿದ್ದೀರಿ ಅದರಲ್ಲಿ ಯಾವುದೇ ಲೋಪ ಬರದ ಹಾಗೆ ಅದನ್ನು ನೋಡಿಕೊಳ್ಳುತ್ತೇವೆಂದು ಭರವಸೆ ಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೇಳುವುದು ಸರ್ವೆಯರ್ ಟ್ರೈನಿಂಗ್ ಆಗಲೇ ಬೇಕು ಕಂಪಲ್‌ಸರಿ ಎಂದು ರೂಲ್ಸ್‌ನಲ್ಲಿ ಇದೆ. ಆದರಿಂದ ರೋಸ್ಟರ್‌ಗೆ ಹೊಡೆತ ಬೀಳುತ್ತದೆ. ಆದಕ್ಕಾಗಿ

ನಾನು ಕೇಳಿಕೊಳ್ಳತಕ್ಕಂಥದ್ದು ತಾವು ರಿಕ್ರೂಟಮೆಂಟ್ ಮಾಡಿ. ಟ್ರೈನಿಂಗ್ ಕಳುಹಿಸಿ like T.C.H., B.Edಗೆ ಏನು ಮಾಡುತ್ತೀರಿ ಹಾಗೆ.

ಶ್ರೀ ಆರ್.ಎಲ್. ಜಾಲಪ್ಪ : ಅದಕ್ಕೆ ಉತ್ತರ ಹೇಳಿದ್ದೇನೆ 300 ಅಥವಾ 400 ಅಥವಾ 500 ಜನ ಸಿಕ್ಕಬಹುದೆಂದು. ಅಲ್ಲಿ ಎಷ್ಟು ಜನ ಪರಿಶಿಷ್ಟ ವರ್ಗದವರು ಸಿಗುತ್ತಾರೆ, ಉಳಿದಿದ್ದನ್ನು ಬೇರೆಯವರಿಂದ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಪದೇ ಪದೇ ಪರಿಶಿಷ್ಟ ಜಾತಿ ಪರಿಶಿಷ್ಟ ಜಾತಿ ಎಂದರೆ ಹೇಗೆ? ರೋಸ್ಟರ್ ಎಂದು ನೀವು ಬರುತ್ತೀರಿ ಅದರಲ್ಲಿ ಎ.ಬಿ.ಸಿ.ಡಿ. Why you are telling only SC/STs? ನನಗೆ ಕೆಲವು ಜನರಿಗೆ ನೋಡಿದರೆ ಅಲರ್ಜಿ ಇದೆ. ಏನಾದರೂ ಪ್ರಶ್ನೆ ಕೇಳಿದರೆ ಇದು ಏನೂ ಎಸ್.ಸಿ.ಗೆ ಸಂಬಂಧಪಟ್ಟ ಹಾಗೆ ಎಂದು ತಿಳಿದುಕೊಳ್ಳುತ್ತಾರೆ. ರೋಸ್ಟರ್ ಮೀನ್ಸ ನೀವೂ ಬರುತ್ತೀರಿ, ಬೇರೆಯವರೂ ಬರುತ್ತಾರೆ, ಎಲ್ಲರಿಗೂ ರೋಸ್ಟರ್ ಸಿಸ್ಟಮ್ ಪ್ರಕಾರ ಎಂದು ಕೇಳುತ್ತಿದ್ದೇವೆ.

ಶ್ರೀ ಆರ್.ಎಲ್. ಜಾಲಪ್ಪ : ಆಗಬಹುದು. ಇನ್ನು 800 ಅಥವಾ 900 ಎಷ್ಟು ಜನ ಟ್ರೈನಿಂಗ್ ಆಗದೇ ಇರುವವರು ಇರುತ್ತಾರೆ ಅವರಿಗೆ ಮ್ಯಾಥೆಮ್ಯಾಟಿಕ್ಸ ಇದ್ದೇ ಇರಬೇಕೆಂದು ನಾವು ಪ್ರಿಸ್ಕೈಬ್ ಮಾಡುತ್ತಿದ್ದೇವೆ. ಅದು ಇದ್ದವರನ್ನು ತೆಗೆದುಕೊಂಡು ಆಮೇಲೆ ಅವರಿಗೆ ಟ್ರೈನಿಂಗ್ ಕೊಡುತ್ತೇವೆ.

ಪುತ್ತೂರು ತಾಲ್ಲೂಕಿನ ಕೃಷಿ ಉತ್ಪನ್ನಗಳ ಮಾರುಕಟ್ಟೆ ಪ್ರಾಂಗಣದ ಕಾರ್ಯಸ್ಥಗಿತ

317 - ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ತಾಲ್ಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣ ಈ ತನಕ ಕಾರ್ಯರಂಭಿಸದಿರಲು ಕಾರಣಗಳೇನು;

ಆ) ಕೃಷಿ ಉತ್ಪನ್ನಗಳ ಮಾರಾಟವನ್ನು ಯಾವಾಗ ಈ ಮಾರುಕಟ್ಟೆ ಪ್ರಾಂಗಣದಲ್ಲಿ ಪ್ರಾರಂಭಿಸಲಾಗುವುದು?

ಶ್ರೀ ಬಿ.ಬಿ. ನಿಂಗಯ್ಯ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಪುತ್ತೂರು ಮಾರುಕಟ್ಟೆಯು ಇತ್ತೀಚೆಗೆ ಮಂಗಳೂರು ಮಾರುಕಟ್ಟೆಯಿಂದ ವಿಭಜಿಸಿಗೊಂಡು ಸ್ವತಂತ್ರ ಮಾರುಕಟ್ಟೆಯಾಗಿ ಈ ಪ್ರಾಂಗಣದಲ್ಲಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವ ದಿಸೆಯಲ್ಲಿ ಕಾರ್ಯರಂಭವಾಗಲು ವಿಳಂಬವಾಗಿದೆ.

ಆ) ಈಗಾಗಲೇ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಶೀಘ್ರದಲ್ಲಿಯೇ ವ್ಯಾಪಾರ ವಹಿವಾಟನ್ನು ನೂತನ ಮಾರುಕಟ್ಟೆ ಪ್ರಾಂಗಣದಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಡಿ.ವಿ. ಸದಾನಂದಗೌಡ : ಸನ್ಮಾನ್ಯ ಅಧ್ಯಕ್ಷರೇ, ನಾನು ಪುತ್ತೂರು ತಾಲ್ಲೂಕಿನ ಕೃಷಿ ಮಾರುಕಟ್ಟೆ ಪ್ರಾಂಗಣವನ್ನು ಈ ತನಕ ಕಾರ್ಯಾರಂಭಿಸದಿರಲು ಕಾರಣಗಳೇನು ಎಂದು ಕೇಳಿದ್ದೆ.